PAPER SET -1

Answer Key

STD: IX. Subject : Kannada ( R3)

Total No of Pages: 6 Maximum Marks : 80

*** ಈ ಕೆಳಗೆ ಕೊಟ್ಟಿರುವ ಪರ್ಯಾಯ ವಾಕ್ಯಗಳಿಂದ ಸರಿಯಾದ ಒಂದನ್ನು ಆರಿಸಿ. ವಾಕ್ಯ ಪೂರ್ಣ ಮಾಡಿ ಬರೆಯಿರಿ. (1x2=2)**

1.ಗಿರಿಜಾ ತನ್ನ ತಮ್ಮ ಸಂಗಮೇಶನಿಗೆ ಪತ್ರ ಬರೆದಳು ಏಕೆಂದರೆ ' ಪುಣೆ ದರ್ಶನ ' ಒಂದು ದಿವಸದ ಪ್ರವಾಸದ ಕುರಿತು ತಿಳಿಸಲು.

2.ಯಾತ್ರಿಕರಿಗೆ ಪ್ರವಾಸ ಮಾಡುವಾಗ ಆತಂಕ ಉಂಟಾಯಿತು ಏಕೆಂದರೆ ತಮ್ಮ ತಮ್ಮ ಆಹಾರ ಚೀಲ ಬರೆದಾಗುತ್ತಿರುವುದನ್ನು ಗಮನಿಸಿ.

*** ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು/ ಕೇಳಿದರು. (1x4=4)**

3. ಈ ಮಾತನ್ನು ಶುದ್ಧೋಧನನು ಸಿದ್ಧಾರ್ಥನಿಗೆ ಹೇಳಿದನು.

4. ಈ ಮಾತನ್ನು ಮಹಾದೇವನ ತನ್ನ ಮಕ್ಕಳಿಗೆ ಹೇಳಿದನು.

5.ಈ ಮಾತನ್ನು ಸುಖಾರಾಮ ತನ್ನ ಹೆಂಡತಿ ಸಾರಜಾಳಿಗೆ ಹೇಳಿದನು.

6.ಈ ಮಾತನ್ನು ಅಮರ ಅಜಯನಿಗೆ ಹೇಳಿದನು.

*** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** (1x4=4)

7.ಮಹಾದೇವನಿಗೆ ಇಬ್ಬರು ಜನ ಮಕ್ಕಳು ಇದ್ದರು.

8.ತಾವು ತಂದ ಆಹಾರ ತಿಂಡಿಗಳನ್ನು ಹಂಚಿಕೊಂಡು ತಿನ್ನೋಣ ಎಂದು ಒಪ್ಪಂದಕ್ಕೆ ಬಂದರು.

9.ಮಹಾರಾಷ್ಟ್ರದ ಸಾಂಸ್ಕೃತಿಕ ರಾಜಧಾನಿ ಶಿಕ್ಷಣದ ತವರು ಮನೆ ಎಂದು ಕರೆಯುತ್ತಾರೆ.

10.ಹೂಪೋ ಪಕ್ಷಿ ನಸು ಕಂದು ಬಣ್ಣವನ್ನು ಹೊಂದಿದೆ.

11.ಸಿದ್ಧಾರ್ಥನ ತಂದೆ ಶುದ್ಧೋಧನ.

***ಕಂಸದಲ್ಲಿ ಕೊಟ್ಟಿರುವ ಶಬ್ದಗಳಲ್ಲಿ ಯೋಗ್ಯವಾದ ಉತ್ತರವನ್ನು ಆರಿಸಿ ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ.(1X4=4)**

12.ಬ್ರೆಡ್

13. ಬಾಗಿದ

14. ಶಿವಲಿಂಗ

15. ಹಂಚಿಕೊಂಡರು

*** ಕೆಳಗಿನ ಬೇಕಾದ ಮೂರು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.(3x3=9)**

16. ದಂಪತಿಗಳು ಕಷ್ಟಪಟ್ಟು ದುಡಿಯುತ್ತಿದ್ದರು. ದೊರೆತ ಉತ್ಪನ್ನದಲ್ಲಿ ಉಂಡು ಉಟ್ಟು ನೆಮ್ಮದಿಯಿಂದ ಇದ್ದರು. ದಾನ ಧರ್ಮಗಳಲ್ಲಿ ಎತ್ತಿದ ಕೈ. ಇವರ ಜೀವನ ಕ್ರಮವನ್ನುನೋಡಿ ಸುಖಾರಾಮನಿಗೆ ಸೋಜಿಗವಾಯಿತು.

17. ಆತನಿಗೆ ಜಿಂಕೆಯನ್ನು ಕಂಡು ಕನಿಕರ ಹುಟ್ಟಿತು. ಮೃದುವಾದ ದೇಹ, ಅದರ ಕಂಗಳ ಕಾಂತಿ ಕಂಡು ಸಿದ್ಧಾರ್ಥನ ಮನ ಕರಗಿತು. ಇಂತಹ ಸುಂದರ ಪ್ರಾಣಿಯನ್ನು ಕೊಲ್ಲುವುದು ಸರಿಯೇ ? ಎಂದೆನಿಸಿತು ಒಂದು ಕ್ಷಣ ಮೌನ ತಾಳಿದ.

18. ತಾಯಿ ಹಕ್ಕಿ ಮರದ ಪೊಟರೆಯಲ್ಲಿ ಅಥವಾ ಗೋಡೆ ಮೇಲಿನ ಗೂಡಿನಲ್ಲಿ ಐದರಿಂದ ಆರು ಮೊಟ್ಟೆಗಳನ್ನು ಇಡುತ್ತದೆ .ಇದು ಪೊಟರೆಯ ಸುತ್ತಲೂ ಕಡ್ಡಿಗಳನ್ನು ತಂದು ಇಟ್ಟು, ಹೊಲಸು ಪದಾರ್ಥಗಳನ್ನು ತಂದು ಹಾಕಿ, ಗೂಡಿಗೆ ಗಟ್ಟಿಯಾದ ಆವರಣ ಕೊಡುತ್ತದೆ. ಆದ್ದರಿಂದ ಹತ್ತಿರ ಹೋದರೆ ಈ ಗೂಡಿನಿಂದ ದುರ್ವಾಸನೆ ಬರುತ್ತದೆ.

19. ಶನಿವಾರವಾಡದ ಭೇಟಿಯ ನಂತರ ನಮ್ಮ ಬಸ್ಸು ವಿಶ್ರಮಭಾಗವಾಡದ ಭವ್ಯವಾದ ದ್ವಾರದ ಮೂರು ಮಹಡಿಯ ಕಟ್ಟಡ ಇದು ಪುಣೆಯ ಶ್ರೀಮಂತ ಸಂಸ್ಕೃತಿ ಹಾಗೂ ಪರಂಪರೆಗಳ ಕಥೆಯನ್ನು ಹೇಳುತ್ತದೆ.

*** ಈ ಕೆಳಗಿನ ಯಾವುದೇ ಒಂದು ಪ್ರಶ್ನೆಗೆ 25 ರಿಂದ 30 ಶಬ್ದಗಳಲ್ಲಿ ಉತ್ತರ ಬರೆಯಿರಿ.**(4x1=4)

20. ರಾಜ ಸೂತ್ರ ಗಳನ್ನೆಲ್ಲ ತಮ್ಮ ಕೈಗೆ ತೆಗೆದುಕೊಂಡರು. ಪ್ರಜೆಗಳ ಕಲ್ಯಾಣಕ್ಕಾಗಿ ಕೆರೆ, ಕಾಲುವೆಗಳನ್ನು ನಿರ್ಮಿಸಿದರು. ಕೃಷಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು. ದಾಸೋಹಗಳನ್ನು ಪ್ರಾರಂಭಿಸಿದರು. ಸರ್ವ ಧರ್ಮಗಳನ್ನು ಸಮಾನ ದೃಷ್ಟಿಯಿಂದ ನೋಡತೊಡಗಿದರು. ಮಠ, ಮಂದಿರಗಳನ್ನು, ದರ್ಗಾಗಳನ್ನು ಕಟ್ಟಿಸಿದರು. ದಕ್ಷ ಆಡಳಿತಗಾರರಾಗಿ, ಸಮಾಜಸೇವಕರಾಗಿ ಜನಸೇವೆ ಮಾಡಿದರು.

21.ನನ್ನದೇ ಕನಸು ಅತ್ಯದ್ಭುತ ! ಏಕೆಂದರೆ ನಾನೊಂದು ಬಹಳ ಚಂದದ ಊರಲ್ಲಿದ್ದೆ. ಅದರ ಸೌಂದರ್ಯ ಬಣ್ಣಿಸಲಿಕ್ಕೆ ಸಾಧ್ಯವಿಲ್ಲ.ಅಬ್ಬಾ ! ಅಲ್ಲಿ ಎಷ್ಟೆಲ್ಲಾ ಅದ್ಭುತ ವಸ್ತುಗಳಿದ್ದವು, ಎಂದರೆ ನಾನು ಬೆಳಗಾಗುವವರೆಗೆ ಲೆಕ್ಕ ಹಾಕುತ್ತಲೇ ಇದ್ದೆ, ಅಲ್ಲೊಬ್ಬ ಮಹಾಜ್ಞಾನಿಯನ್ನು ನಾನು ಭೇಟಿಯಾದೆ. ಅವರು ಹೇಳಿದ್ದೇನೆಂದರೆ ನೀನೇ ಈ ಬ್ರೆಡ್ಗೆ ಅರ್ಹ, ಏಕೆಂದರೆ ನನ್ನ ಹಿಂದಿನ ಜನ್ಮಗಳಲ್ಲಿ ಈ ಪ್ರಪಂಚಕ್ಕೆ ನನ್ನಿಂದ ಎಷ್ಟು ಉಪಕಾರವಾಗಿದೆ.

*** ಈ ಕೆಳಗಿನಕವಿತೆಯ ಪ್ರಶ್ನೆಗಳಿಗೆ ಒಂದೊಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ. (1x4=4)**

22. ಹಂಪೆ, ಐಹೊಳೆ, ಬಿಜಾಪುರ ಸಾಹಿತ್ಯ ಶಿಲ್ಪಕಲೆಗಳ ತವರೂರು ಆಗಿವೆ.

23.ಕೂಸು ಕಂದಯ್ಯ ಒಳ ಹೊರಗೆ ಆಡಿದರೆ ಬೀಸಣಿಕೆ ಗಾಳಿ ಬೀಸುವುದು.

24.ನಾಳೆಯ ದಿನಗಳ ಸುಂದರಗೊಳಿಸಲು ಕಾಳಜಿ ವಹಿಸುವ ಸೂತ್ರವನ್ನು ಕವಿ ಹೇಳಲು ಬಯಸುತ್ತಾನೆ.

25. ಕಂದನನ್ನು ಅಥವಾ ಮಗುವನ್ನು ಬಾಲ ಚಕ್ರವರ್ತಿ ಎಂದು ಕರೆಯಲಾಗಿದೆ.

*** ಈ ಕೆಳಗಿನಕವಿತೆಯ ಬೇಕಾದ ಎರಡು ಪ್ರಶ್ನೆಗಳಿಗೆ 10 ರಿಂದ 15 ಶಬ್ದಗಳಲ್ಲಿಉತ್ತರ ಬರೆಯಿರಿ.** (2x2=4)

26. ದಿನಾಲೂ ಹಾಲು ಹಣ್ಣುಗಳನ್ನು ಸೇವಿಸಬೇಕು ಮತ್ತು ಅಧಿಕ ನೀರನ್ನು ಸೇವಿಸಬೇಕುಹಾಗೂ ಪೌಷ್ಟಿಕ ಆಹಾರವನ್ನು ಸೇವಿಸಬೇಕು.

27. ನಾವು ಯಾರಿಗಾದರೂ ಮಾತನ್ನು ಕೊಡುವ ಮೊದಲು, ಮನದಲ್ಲಿ ಯೋಚಿಸಬೇಕು. ಒಮ್ಮೆ ಮಾತನ್ನು ಕೊಟ್ಟರೆ ಅದನ್ನು ಉಳಿಸಿಕೊಳ್ಳಬೇಕು. ನಾವು ಇತಿಮಿತಿಯಲ್ಲಿ ಮಾತನ್ನು ಹೇಳಬೇಕು. ಮಾತಿನ ಗುಲಾಮನಾಗಬಾರದು.

28. ಕವಿಯು ಬೆಂಬ ಹೃದಯಕೆ ಶ್ರೀಗಂಧದ ಸುಗಂಧದ ಸುವಾಸನೆ ಕಂಪು ಎಂದು ಹೇಳಿದ್ದಾರೆ. ದಾಸರ ಶರಣರ ಭಕ್ತಿ ಮಾರ್ಗದ ಆದರ್ಶ ಹಾಡುಗಳು ನಮ್ಮ ಮನಕ್ಕೆ ಬಲು ಇಂಪನ್ನು ನೀಡುತ್ತವೆ ಎಂದು ಹೇಳಿದ್ದಾರೆ.

*** ಈ ಶಬ್ದದ ಅರ್ಥ ಗುರುತಿಸಿ ಬರೆಯಿರಿ.**

29. ಹರಕೆ - ಹಾರೈಕೆ (1)

30. ಜಿಪುಣ – ಲೋಭಿ (1)

*** ಕೆಳಗಿನ ವಿಶೇಷಣ ಶಬ್ದಗಳನ್ನು ಗುರುತಿಸಿ ಬರೆಯಿರಿ.**

31. ದೊಡ್ಡ (1)

32. ಕನಿಕರ (1)

*** ಈ ಶಬ್ದದ ಸಂಧಿ ವಿಗ್ರಹಿಸಿ ಬರೆದ ರೂಪವನ್ನು ಗುರುತಿಸಿ ಬರೆಯಿರಿ.**

33. ಸೂರ್ಯೋದಯ- ಸೂರ್ಯ + ಉದಯ (1)

34. ಆಟೋಟ- ಆಟ + ಓಟ (1)

*** ಈ ಶಬ್ದದ ವಚನ ಬದಲಿಸಿಬರೆಯಿರಿ..**

35. ಪುಸ್ತಕ - ಪುಸ್ತಕಗಳು (1)

36. ಅವನು- ಅವರು (1)

*** ಈ ಶಬ್ದದ ಲಿಂಗ ಬದಲಿಸಿ ಬರೆಯಿರಿ.**

37. ಸೇವಕ- ಸೇವಕಿ (1)

38. ಕುಮಾರಿ– ಕುಮಾರ (1)

*** ಈ ಶಬ್ದದ ವಿರುದ್ಧಾರ್ಥಕ ಶಬ್ದವನ್ನು ಗುರುತಿಸಿ ಬರೆಯಿರಿ.**

39 .ಪ್ರತ್ಯಕ್ಷ x ಅಪ್ರತ್ಯಕ್ಷ (1)

40. ಜ್ಞಾನ x ಅಜ್ಞಾನ (1)

*** ಈ ಶಬ್ದದ ಸಮನಾರ್ಥಕ ಶಬ್ದವನ್ನು ಗುರುತಿಸಿ ಬರೆಯಿರಿ.**

41. ಆಕಾಶ - ಆಗಸ (1)

42. ರಾಜ - ಅರಸ (1)

* ಈ ಕೆಳಗಿನ ಶಬ್ದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ. (1X2=2)

43.ಗಮನಹರಿಸು - ನಾನು ಶಿಕ್ಷಕರು ಪಾಠ ಹೇಳುವಾಗ ಗಮನಹರಿಸಿ ಕೇಳುತ್ತೇನೆ.

44.ಸುಂದರ - ಮಳೆಗಾಲದಲ್ಲಿ ಜೋಗ ಜಲಪಾತ ಸುಂದರವಾಗಿ ಕಾಣುತ್ತದೆ.

*** ಈ ಕೆಳಗಿನ ಬೇಕಾದ ಎರಡು ಗಾದೆ ಮಾತುಗಳ ಸರಳ ಅರ್ಥ ಬರೆಯಿರಿ.** (1X2=2)

45. ಆಕಳು ಕಪ್ಪಾದರೆ ಹಾಲು ಕಪ್ಪೆ

ಆಕಳು ಬೇರೆ ಬೇರೆ ಬಣ್ಣಗಳನ್ನು ಹೊಂದಿದ್ದರೂ ಕೂಡ ಅವುಗಳು ಕೊಡುವ ಹಾಲು ಮಾತ್ರ ಬಿಳಿಯಾಗಿರುತ್ತದೆ. ಅದರಂತೆ ಸಮಾಜದಲ್ಲಿ ವ್ಯಕ್ತಿಗಳನ್ನು ಅವರ ಬಣ್ಣದಿಂದ ಒಳ್ಳೆಯವ , ಕೆಟ್ಟವ ಎಂದು ಹೇಳಲು ಸಾಧ್ಯವಿಲ್ಲ, ಎಂಬುದೇ ಈ ಗಾದೆ ಮಾತಿನ ಅರ್ಥವಾಗಿದೆ.

46. ಕೋಶವನ್ನಾದರೂ ಇಲ್ಲವೇ ದೇಶವನ್ನಾದರೂ ಸುತ್ತು

ನಮಗೆ ಜ್ಞಾನ ದೊರೆಯಬೇಕಾದರೆ ನಾವು ಪುಸ್ತಕಗಳನ್ನು ಓದಬೇಕು. ಓದುವುದು ಆಗದಿದ್ದರೆ ನಾವು ಪ್ರವಾಸ ಮಾಡುವುದರಿಂದ ನಮಗೆ ಪ್ರತ್ಯಕ್ಷ ಜ್ಞಾನ ಸಿಗುತ್ತದೆ ಎಂಬುದೇ ಈ ಗಾದೆ ಮಾತಿನ ಅರ್ಥವಾಗಿದೆ.

47. ಜನಸೇವೆ ಜನಾರ್ಧನ ಸೇವೆ

ನಾವು ದೇವರಿಗೆ ಬಹಳ ಹಣ ಖರ್ಚು ಮಾಡಿ ಪೂಜೆ , ದೀನ, ದಲಿತರ ಸೇವೆಯನ್ನು ಮಾಡಿದರೆ ನಮಗೆ ದೇವರ ಪೂಜೆ ಮಾಡಿದ್ದಕ್ಕಿಂತ ಹೆಚ್ಚಿನ ಪುಣ್ಯ ದೊರೆಯುತ್ತದೆ. ಎಂಬುದೇ ಈ ಗಾದೆ ಮಾತಿನ ಅರ್ಥ.

48. **ಕೆಳಗಿನವುಗಳಲ್ಲಿ ಯಾವುದೇ ಒಂದು ವಿಷಯದ ಕುರಿತು 50 ರಿಂದ 60 ಶಬ್ದಗಳಲ್ಲಿ ನಿಬಂಧ ಬರೆಯಿರಿ. (1X6=6)**

ಪ್ರತಿಪಾದನೆ – 1
ವಿಷಯ – 3
ಭಾಷೆ – 1
ಪ್ರಭಾವ – 1

**49. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ (1X6=6)**

ವಿಳಾಸ – 1
ಭಾಷೆ – 1
ಪ್ರಾರಂಭ - 1
ಆಶಯ - 2
ಮುಕ್ತಾಯ – 1

**50. ಕೆಳಗಿನ ವಾಕ್ಯಗಳ ಸಹಾಯದಿಂದ ಒಂದು ಸ್ವತಂತ್ರವಾದ ಕಥೆಯನ್ನು ರಚಿಸಿ ಬರೆಯಿರಿ ಮತ್ತು ಯೋಗ್ಯತೆ ಬರಹ ನೀಡಿರಿ. (1x6=6)**

ಪ್ರತಿಪಾದನೆ – 1
ವಿಷಯ – 3
ಭಾಷೆ – 1
ತಲೆಬರಹ – 1

*** ಕೆಳಗಿನ ಗದ್ಯ ಭಾಗವನ್ನು ಓದಿ ಆದರೆ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

51. ಉತ್ತರ ದೇಶದಲ್ಲಿ ಚಿತ್ರಾಂಥ ಎಂಬ ರಾಜನಿದ್ದನು. . (1)

52. ರಾಜನು ನಿರ್ಮಿಸಿದ ಸರೋವರದ ಹೆಸರು ಪದ್ಮ ಸರೋವರ. (1)

53. ಸರೋವರದ ಸ್ವಚ್ಛತೆ ಮತ್ತು ಶುಭ್ರತೆಯನ್ನು ಕಾಪಾಡುವುದಕ್ಕಾಗಿ ಸೇವಕರನ್ನು ನೇಮಿಸಿದನು. (1)

54. ಬಂಗಾರದ ಹಕ್ಕಿಗೆ ಪದ್ಮ ಸರೋವರದಲ್ಲಿ ವಾಸ ಮಾಡಬೇಕೆಂಬ ಇಚ್ಛೆ ಇತ್ತು. (1)

55. ಹಂಸಗಳು ಪ್ರತಿ ಆರು ತಿಂಗಳಿಗೆ ಒಂದು ಬಾರಿ ಬಂಗಾರದ ಗರಿಯನ್ನು ಕೊಡುತ್ತಿದ್ದವು. (1)

*** ಈ ಕೆಳಗಿನ ಕವಿತೆಗಳ ಸರಳ ಅರ್ಥ ಬರೆಯಿರಿ.** (3)

56. • ಸುಗ್ಗಿಯು ಬಂದಾಗ ರೈತರು ಬಹಳ ಆನಂದದಿಂದ ಇರುತ್ತಾರೆ. ಅವರ ಫಸಲು ಕೈಗೆ ಬಂದಾಗ ಎಲ್ಲರೂ ತಮ್ಮ ಗದ್ದೆಗಳಲ್ಲಿ ಹಗಲಿರುಳುಎನ್ನದೆ ಕಷ್ಟಪಟ್ಟು ದುಡಿಯುತ್ತಾರೆ. ಆಗ ಅವರಿಗೆ ಸ್ವರ್ಗದ ಸುಖದ ಅನುಭವವಾಗುತ್ತದೆ ಎಂದು ಕವಿ ಹೇಳಿದ್ದಾರೆ.

**(ಅಥವಾ )**

• ಗೋಮಾತೆಯ ಸಗಣಿಯನ್ನು ತಟ್ಟಿ ತಟ್ಟಿ ಕುರುಳುಗಳನ್ನು ತಯಾರಿಸುತ್ತಾರೆ. ಈ ಕುರುಳುಗಳನ್ನು ಅಡುಗೆ ಮಾಡಲು ಸೌದೆಯಾಗಿ ಉಪಯೋಗಿಸುತ್ತಾರೆ. ಅದನ್ನು ಸುಟ್ಟ ಮೇಲೆ ಆ ಬೂದಿಯಿಂದ ನೊಸಲಿಗೆ ಹಚ್ಚಿಕೊಳ್ಳುವ ವಿಭೂತಿಯನ್ನು ತಯಾರಿಸುತ್ತಾರೆ. ನಾವು ಅದನ್ನು ಕುರುಳು ಮಾಡದೆ ಹಾಗೆ ಹಾಕಿದರೆ ಅದು ಹೊಲಕ್ಕೆ ಗೊಬ್ಬರವಾಗುತ್ತದೆ. ಗೋವು ಮಾನವನಿಗೆ ನಿನ್ನಿಂದ ಏನು ಉಪಕಾರವಾಗಿದೆಯೋ? ಎಲೆ ಮಾನವ ಎಂದು ಕೇಳುತ್ತದೆ ಎಂಬುದೇ ಪದ್ಯದ ಸರಳ ಅರ್ಥವಾಗಿದೆ.

#######################